## 24. ಪಂಚಾಯಿತಿ ಮೀಸಲು ಐದು ವರ್ಷಕ್ಕೆ ಇಳಿಕೆ

ಗ್ರಾಮ ಪಂಚಾಯಿತಿ ವಾರ್ಡ್ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿ ಕ್ಷೇತ್ರಗಳ ಮೀಸಲು ಅವಧಿಯನ್ನು ಹತ್ತು ವರ್ಷಗಳಿಂದ 5 ವರ್ಷಕ್ಕೆ ಇಳಿಸುವ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ವಿಧೇಯಕ್ಕೆ ವಿಧಾನ ಸಭೆಯಲ್ಲಿ ಒಪ್ಪಿಗೆ ದೊರೆಕಿದೆ.

ಪಂಚಾಯತ್ ರಾಜ್ ಸಚಿವ ಕೆ. ಎಸ್. ಈಶ್ವರಪ್ಪ ವಿಧೇಯಕವನ್ನು ಮಂಡಿಸಿ ಮೀಸಲು ಸೌಲಭ್ಯ ಪರಿಣಾಮಕಾರಿಯಾಗಿ ಲಭಿಸುವಂತೆ ಮಾಡುವ ಉದ್ದೇಶದಿಂದ ತಿದ್ದುಪಡಿ ಜಾರಿಗೆ ತರಲಾಗುತ್ತಿದೆ ಎಂದು ವಿವರಿಸಿದರು. ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಸದಸ್ಯ ರಮೇಶ್ ಕುಮಾರ್, ಇದು ಸಾಮಾಜಿಕ ನ್ಯಾಯ ಮತ್ತು ಮೀಸಲು ನೀತಿಗೆ ವಿರುದ್ಧವಾಗಿದೆ. ಇದೊಂದು ದುರಂತ. ಇಂಥ ಕಾಯಿದೆ ಜಾರಿಗೆ ಈಶ್ವರಪ್ಪನಂಥವರನ್ನು ಬಳಸಿಕೊಳ್ಳುವುದಕ್ಕೆ ಬೇಸರವಾಗುತ್ತಿದೆ. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸುವುದನ್ನು ತಪ್ಪಿಸಲು ಕನಿಷ್ಠ 30 ತಿಂಗಳು ಯಾವುದೇ ಅವಿಶ್ವಾಸ ಮಂಡನೆಗೆ ಅವಕಾಶ ಇರಬಾರದು. ಪಂಚಾಯಿತಿಗಳ ಚುನಾವಣೆಯನ್ನು ಆಯೋಗವೇ ನಡೆಸಿ ಎಲ್ಲ ವೆಚ್ಚವನ್ನು ಆಯೋಗವೇ ಭರಿಸುವಂತಾಗಬೇಕು. ಮತದಾನಕ್ಕೆ 8 ದಿನ ಮುನ್ನ ಮದ್ಯ ಮಾರಾಟ ನಿಷೇಧ ಮಾಡಬೇಕೆಂದು ಪ್ರಸ್ತಾಪಿಸಲಾಗಿತ್ತು ಎಂದರು.

**ಕಾಂಗ್ರೆಸ್ ವಿರುದ್ಧವೇ ಆಕ್ರೋಶ:** ಈ ಕಾಯಿದೆಯನ್ನು ನಮ್ಮ ಸರ್ಕಾರದ ಅವಧಿಯಲ್ಲೇ ಸರಿಯಾಗಿ ಜಾರಿ ಮಾಡಲಿಲ್ಲ, ಸತ್ಯ ಹೇಳಿದರೆ ನಮ್ಮ ನಾಯಕರಿಗೆ ಬೇಸರವಾಗುತ್ತದೆ. ಮಾತನಾಡದಿದ್ದರೆ ಆತ್ಮಸಾಕ್ಷಿಗೆ ದ್ರೋಹ ಮಾಡಿಕೊಂಡಂತಾಗುತ್ತದೆ. ನಾನು ನೀಡಿದ ವರದಿ ಆಧರಿಸಿ ಸಿದ್ಧಗೊಳಿಸಿದ ವಿಧೇಯಕ ಜಾರಿಗೆ ನಮ್ಮ ಸರ್ಕಾರವೇ ಮನಸ್ಸು ಮಾಡಲಿಲ್ಲ. ಆದರೆ, ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ರಾಹುಲ್ ಗಾಂಧಿ ಜಾರಿಗೆ ಸೂಚನೆ ನೀಡಿದ ಮೇಲೆ ಕ್ರಮ ತೆಗೆದುಕೊಂಡರು. ಆದರೆ, ಚುನಾವಣೆ ನಡೆಸುವಾಗ ಹೊಸ ಕಾಯಿದೆ ಬಿಟ್ಟು ಹಳೆ ನಿಯಮ ಪ್ರಕಾರ ನಡೆಸಿದರು. ಇದು ವಿಪರ್ಯಾಸವಲ್ಲವೇ ಇಂಥದ್ದನ್ನೂ ಎಲ್ಲಾದರೂ ನೋಡಿದ್ದೀರಾ ಎಂದು ಪ್ರಶ್ನಿಸಿದರು.

ಜೆಡಿಎಸ್ ನಾಯಕ ಎಚ್.ಡಿ. ರೇವಣ್ಣ ಮಾತನಾಡಿ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲು ಇಲ್ಲದ ಸಂದರ್ಭದಲ್ಲಿಯೇ ದಲಿತರು ಮತ್ತು ಹಿಂದುಳಿದವರಿಗೆ ದೇವೇಗೌಡರು ಅಧ್ಯಕ್ಷ ಸ್ಥಾನ ಕಲ್ಪಿಸಿಕೊಟ್ಟಿದ್ದರು. ವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿ ಇರಬೇಕು ಎಂದರು ದೇವೇಗೌಡರು ಪ್ರಧಾನಿಯಾಗಿದ್ದಾಗಲೇ ವಿಧೇಯಕ ಮಂಡಿಸಿದ್ದರು ಎಂದರು. ಈ ಸಂದರ್ಭದಲ್ಲಿ ಮಧ್ಯಪ್ರವೇಶ ಮಾಡಿದ ಮಹಿಳಾ ಸದಸ್ಯರು ಈಗಾಲಾದರೂ ಪಾಸ್ ಮಾಡಿಸಿ ಕೊಡಿ ಸರ್ ಎಂದು ಎಲ್ಲರೂ ಪಕ್ಷ ಮರೆತು ಆಗ್ರಹಿಸಿದರು. ಆಗ ಮಧ್ಯ ಪ್ರವೇಶಿಸಿದ ಪ್ರೀತಂಗೌಡ ರೇವಣ್ಣ ವಾದಿಸುತ್ತಿರುವುದು ಮಹಿಳೆಯರ ಪರ ಅಲ್ಲ ಹೊಳೆನರಸೀಪುರ ಕ್ಷೇತ್ರವನ್ನು ತಮ್ಮ ಮನೆಯವರಿಗೆ ಮೀಸಲು ಮಾಡುವುದಕ್ಕೆ ಎಂದು ಕುಟುಕಿದರು.

**ವಿಧೇಯಕದ ಅಂಶಗಳು:–**

- ಕ್ಷೇತ್ರಗಳ ಮೀಸಲು ಅವಧಿ 10 ವರ್ಷದಿಂದ 5 ವರ್ಷಕ್ಕೆ ಇಳಿಕೆ
- ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ವಿರುದ್ಧ 15 ತಿಂಗಳಿಗಿಂತ ಮುಂಚೆ ಅವಿಶ್ವಾಸ ಮಂಡಿಸುವಂತಿಲ್ಲ
- ಮತದಾನ ದಿನಾಂಕಕ್ಕೆ 2 ದಿನ ಮುಂಚಿತವಾಗಿ ಮದ್ಯ ಮಾರಾಟ ನಿಷೇಧ.

ಆಧಾರ:ವಿಜಯ ಕರ್ನಾಟಕ, ದಿನಾಂಕ:26.09.2020